**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 67/2011**

ಚಾ.ಸಾ–12, ಫ್ರಾ.ಸಾ–06

| | | |
|---|---|---|
| ಹೆಸರು | : | ಎಂ. ಶಿವಣ್ಣ |
| ತಂದೆಯ ಹೆಸರು | : | ಲೇಟ್ ಮಾದಯ್ಯ |
| ವಯಸ್ಸು | : | 51 |
| ವೃತ್ತಿ | : | ಪೊಲೀಸ್ ನಿರೀಕ್ಷಕರು,<br>ವಿವಿ ಪುರಂ ಸಂಚಾರಿ ಪೊಲೀಸ್ ಠಾಣೆ, ಬೆಂಗಳೂರು |
| ವಾಸ | : | ಬೆಂಗಳೂರು |

**ದಿನಾಂಕ 16.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಜನವರಿ 2015 ರಿಂದ ಜುಲೈ 2016 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18.04.2015 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಚಾಸಾ–11 ರವರಿಂದ ಪಡೆದಿರುತ್ತೇನೆ. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಫ್ರಾಸಾ–3 ರವರು ತೋರಿಸಿದಂತೆ ಪಂಚರಾದ ಫ್ರಾಸಾ–1 ಮತ್ತು ಚಾಸಾ–10 ರವರ ಸಮಕ್ಷಮ ಮಧ್ಯಾಹ್ನ 3.30 ರಿಂದ 4.15 ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು.

ಅದೇ ದಿನ ಪ್ರಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 19.04.2015 ರಂದು ಪ್ರಾಸಾ-2, 4, 5, ಚಾಸಾ-4 ರಿಂದ 6 ಮತ್ತು 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 26.02.2016 ರಂದು ಈ ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು: ಶ್ರೀ ಎಸ್.ಜೆ. ವಕೀಲರಿಂದ ಆರೋಪಿತರ ಪರವಾಗಿ**:-

ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯ ಪ್ರತಿ ನಮ್ಮ ಠಾಣೆಯಲ್ಲಿರುತ್ತದೆ ಎಂದರೆ ಸರಿ. ತಪ್ಪನ್ನು ಮಾಡಿದ ವ್ಯಕ್ತಿಗಳನ್ನು ದಸ್ತಗಿರಿ ಮಾಡುವುದು ಪೊಲೀಸರ ಕಾನೂನುಬದ್ಧ ಕರ್ತವ್ಯವೆಂದರೆ ಸರಿ. ಆರೋಪಿತರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿಲ್ಲ ಎಂದರೆ ಸಿಬ್ಬಂದಿಯ ಕೊರತೆಯಿಂದ ಮಾಡಿಲ್ಲ. ಆ ಕುರಿತು ಠಾಣಾ ದಿನಚರಿಯಲ್ಲಿ ನಮೂದಿಸಿಲ್ಲ. ಆರೋಪಿತರನ್ನು ಗುರುತಿಸುವ ಸಂಬಂಧ ಕವಾಯತ್ತನ್ನು ಮಾಡಿರಲಿಲ್ಲ. ಈ ಪ್ರಕರಣದಲ್ಲಿ ಕೆಲವು ಸರ್ಕಾರಿ ನೌಕರರನ್ನು ಸಾಕ್ಷಿದಾರರನ್ನಾಗಿ ಮಾಡಿದ್ದು, ಅವರ ಹೇಳಿಕೆಗಳನ್ನು ಪಡೆಯುವ ಪೂರ್ವದಲ್ಲಿ ಅವರಿಗೆ ನೋಟೀಸ್ ನೀಡಿಲ್ಲ.

ಸಿಸಿ ಸಂಖ್ಯೆ: 67/2017

ಘಟನಾ ಸ್ಥಳದ ಪಕ್ಕವಿದ್ದ ಓಣಿಯಲ್ಲಿ ಪಂಚನಾಮವನ್ನು ಮಾಡಿಲ್ಲ. ಶಿವಮೂರ್ತಿ ಎನ್ನುವವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿಲ್ಲ ಮತ್ತು ಅವರ ಹೇಳಿಕೆಯನ್ನು ಪಡೆದಿಲ್ಲ.

ನಿಪಿ.5 ರ ಪಂಚನಾಮದ ಪೂರ್ವ ಮತ್ತು ಪಶ್ಚಿಮಕ್ಕೆ ಇರುವ ರಸ್ತೆ ಸರ್ಕಾರಿ ರಸ್ತೆಯೋ ಅಥವಾ ಖಾಸಗಿ ರಸ್ತೆಯೋ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಯಾವುದೇ ರಸ್ತೆಯಿಲ್ಲ ಎಂದರೆ ಸರಿಯಲ್ಲ. ಆ ಪಂಚನಾಮ ಸ್ಥಳದ ಅಕ್ಕಪಕ್ಕ ಬಸಪ್ಪ ಮತ್ತು ಚೆನ್ನತಾಯಮ್ಮ ರವರ ಜಮೀನುಗಳು ಇವೆ ಎಂದು ಹೇಳಿದ್ದು, ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿಲ್ಲ. ಹಾಗಾಗಿ, ನಾನು ಸ್ಥಳದಲ್ಲಿ ಯಾವುದೇ ಪಂಚನಾಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಕೊಣಗಳ್ಳಿ ಗ್ರಾಮದ ಜಯಪ್ಪ ಎನ್ನುವವರ ಮಾತಿನ ಮೇರೆಗೆ ಪಂಚನಾಮೆಯನ್ನು ಠಾಣೆಯಲ್ಲಿ ಸಿದ್ಧಪಡಿಸಲಾಗಿದೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲದೆ ಇದ್ದರೂ ಕೂಡ ನಾನು ಸದರಿ ಜಯಪ್ಪ ರವರ ಮಾತಿನ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ. ನರಸೀಪುರ**